# ನಿಮ್ಮೊಡನೆ

## ಲೈಂಗಿಕ ಕಿರುಕುಳಕ್ಕೆ ತಡೆ

ರಾತ್ರಿ ಪಾಳಿ ಅಥವಾ ಕ್ಲಿಷ್ಟಕರ ಕೆಲಸಗಳು ಮಹಿಳೆಯರಿಗೆ ಆಗುವುದಿಲ್ಲ ಎಂಬ ನೆಪ ನೀಡಿ ಕೆಲವು ಉದ್ದಿಮೆದಾರರು ಇತ್ತೀಚಿನ ವರ್ಷಗಳಲ್ಲಿ ಮಹಿಳೆಯರನ್ನು ನೇಮಿಸಿಕೊಳ್ಳುವುದನ್ನೇ ನಿಲ್ಲಿಸಿದ್ದಾರೆ! ಅಂದರೆ ಹಿನ್ನಡೆ ಶುರುವಾಗಿದೆ. ಈ ಹಿನ್ನಡೆಗೆ ಮಹಿಳೆಯೇ ಕಾರಣವಾಗಿದ್ದಾಳೆ ಎಂಬುದು ಒಂದು ವಿಪರ್ಯಾಸ.

ಮಹಿಳಾ ಉದ್ಯೋಗಿಗಳ ಮೇಲೆ ನಡೆಯುವ ಲೈಂಗಿಕ ಕಿರುಕುಳವನ್ನು ಪರಿಣಾಮಕಾರಿಯಾಗಿ ತಡೆಯಲು ಕರ್ನಾಟಕ ನಾಗರಿಕ ಸೇವಾ ನಿಯಮಗಳನ್ನು ಪರಿಷ್ಕರಿಸಲಾಗಿದೆ. ಈ ಸಂಬಂಧ ಕರಡು ಸಿದ್ಧಗೊಂಡಿದೆ. ಜೂನ್ 13ರಂದು ಜರುಗಿದ ರಾಜ್ಯ ಸಚಿವ ಸಂಪುಟ ಅದನ್ನು ಅಂಗೀಕರಿಸಿದೆ. ಕರಡು ಅಧಿಸೂಚನೆಯನ್ನು ಶೀಘ್ರವೇ ಹೊರಡಿಸಿ ಸಾರ್ವಜನಿಕರಿಂದ ಸಲಹೆ ಹಾಗೂ ಆಕ್ಷೇಪಣೆ ಆಲಿಸಿದ ಬಳಿಕ ಅಂತಿಮ ಅಧಿಸೂಚನೆ ಹೊರಡಿಸಲಾಗುವುದು ಎಂದೂ ರಾಜ್ಯ ಸರ್ಕಾರ ಪ್ರಕಟಿಸಿದೆ.

ಸರ್ಕಾರಿ, ಅರೆ ಸರ್ಕಾರಿ ಹಾಗೂ ಅನುದಾನ ಪಡೆಯುವ ಸಾರ್ವಜನಿಕ ಉದ್ದಿಮೆಗಳ ಮಹಿಳಾ ನೌಕರರು ಇದರ ವ್ಯಾಪ್ತಿಯಲ್ಲಿ ಬರುತ್ತಾರೆ. ಲೈಂಗಿಕ ಕ್ರಿಯೆಗೆ ಮಹಿಳಾ ಉದ್ಯೋಗಿಯನ್ನು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಒತ್ತಾಯಿಸುವುದು, ಬ್ಲಾಕ್‌ಮೇಲ್ ಮಾಡುವುದು, ಪೀಡಿಸುವುದು, ಅಶ್ಲೀಲ ಚಿತ್ರಗಳನ್ನು ತೋರಿಸುವುದು –ಲೈಂಗಿಕ ಕಿರುಕುಳದ ವ್ಯಾಪ್ತಿಯಲ್ಲಿ ಬರುತ್ತವೆ. ಕಿರುಕುಳ ನೀಡಿದ ವ್ಯಕ್ತಿ ವಿರುದ್ಧ ವಿಚಾರಣೆ ನಡೆಸಿ ಶಿಸ್ತುಕ್ರಮ ಕೈಗೊಳ್ಳುವ ತಿದ್ದುಪಡಿಯನ್ನೂ ಕರಡು ಹೊಂದಿದೆ. ದೆಹಲಿಯ ಅತ್ಯಾಚಾರ ಪ್ರಕರಣದ ನಂತರ ಎದ್ದ ಜನಜಾಗೃತಿಯ ಹಿನ್ನೆಲೆಯಲ್ಲಿ ಸುಪ್ರೀಂಕೋರ್ಟ್ ನೀಡಿದ ಮಾರ್ಗಸೂಚಿಗಳನ್ನು ಗಮನದಲ್ಲಿಟ್ಟುಕೊಂಡು ನಿಯಮಗಳಲ್ಲಿ ರಾಜ್ಯ ಸರ್ಕಾರ ಅಲ್ಪಸ್ವಲ್ಪ ಬದಲಾವಣೆ ಮಾಡಿ ಪರಿಣಾಮಕಾರಿಯಾಗಿ ಜಾರಿಮಾಡಲು ಈಗ ಸಜ್ಜಾಗಿದೆ. ಆದರೆ ಕರಡು ಏನೇನು ತಿದ್ದುಪಡಿ ಒಳಗೊಂಡಿದೆ ಎಂಬುದು ಅಧಿಸೂಚನೆ ಹೊರಡಿಸಿದ ನಂತರವಷ್ಟೇ ಗೊತ್ತಾಗಬೇಕಿದೆ. ಲೋಕಸಭೆ 2012ರ ಸೆಪ್ಟಂಬರ್‌ನಲ್ಲಿ ಅಂಗೀಕರಿಸಿದ ಮಸೂದೆಯು ಲೈಂಗಿಕ ಕಿರುಕುಳ ತಡೆಗೆ ಪರಿಣಾಮಕಾರಿ ಕ್ರಮಗಳನ್ನು ಒಳಗೊಂಡಿದೆ. ಹಾಗಾಗಿ ಈ ತಿದ್ದುಪಡಿಯಲ್ಲಿ ಅಷ್ಟೇನು ವ್ಯತ್ಯಾಸ ಇರಲಾರದು.

ಲೈಂಗಿಕ ಕಿರುಕುಳವನ್ನು ಮಸೂದೆಯಲ್ಲಿ ಕೂಲಂಕಷವಾಗಿ ವಿವರಿಸಲಾಗಿದೆ. ಲೈಂಗಿಕ ಕಿರುಕುಳ ಎಂದರೆ ಮಾನವ ಹಕ್ಕುಗಳ ಉಲ್ಲಂಘನೆ ಎಂದು 1997ರಲ್ಲೇ ಅಭಿಪ್ರಾಯಪಟ್ಟಿದ್ದ ಸುಪ್ರೀಂಕೋರ್ಟ್, ಕಿರುಕುಳ ತಡೆಗೆ ಮಾರ್ಗದರ್ಶಿ ಸೂತ್ರಗಳನ್ನು ಸೂಚಿಸಿತ್ತು. ಸುಪ್ರೀಂಕೋರ್ಟಿನ ಸೂಚನೆಯನ್ವಯ ಮಸೂದೆಯು ಸರ್ಕಾರಿ ಹಾಗೂ ಖಾಸಗಿ ವಲಯಗಳಲ್ಲಿ ಸಮಾನತೆ, ಸ್ವಾತಂತ್ರ್ಯ ಹಾಗೂ ಬದುಕುವ ಹಕ್ಕನ್ನು ಕಲ್ಪಿಸುವ ಧ್ಯೇಯದೊಂದಿಗೆ ಸಮಗ್ರ ನೀತಿಯನ್ನು ರೂಪಿಸಿದೆ. ಲೈಂಗಿಕ ಕಿರುಕುಳ ತಡೆಗೆ ಕಚೇರಿಗಳಲ್ಲಿ ಆಂತರಿಕ ದೂರು ಸಮಿತಿ ಇರಬೇಕು. ಕಿರುಕುಳಕ್ಕೆ ಒಳಗಾದ ಮಹಿಳೆ ಈ ಸಮಿತಿಗೆ ದೂರು ಸಲ್ಲಿಸಬೇಕು ಎಂದು ಮಸೂದೆ ಸ್ಪಷ್ಟವಾಗಿ ಹೇಳಿದೆ.

ಮನೆ ಗೆಲಸದವರು, ಕೂಲಿಗಳಂತಹ ಅಸಂಘಟಿತ ಕ್ಷೇತ್ರಗಳಲ್ಲಿ ದುಡಿಯುವ ಮಹಿಳೆಯರು ಲೈಂಗಿಕ ಕಿರುಕುಳಕ್ಕೆ ಒಳಗಾದರೆ ಅವರಿಗೆ ದೂರು ಸಲ್ಲಿಸಲು ಜಿಲ್ಲಾ ಮಟ್ಟದ ಸ್ಥಳೀಯ ದೂರು ಸಮಿತಿ ರಚಿಸಬೇಕು ಎಂದೂ ಮಸೂದೆಯಲ್ಲಿ ಹೇಳಲಾಗಿದೆ. ಸಂಘಟಿತ ವಲಯಕ್ಕೆ ಸಿಕ್ಕ ಸುರಕ್ಷತೆಯನ್ನು ಅಸಂಘಟಿತ ವಲಯಕ್ಕೂ ವಿಸ್ತರಿಸಿದ್ದು ಮಸೂದೆಯ ಮಹತ್ವದ ಅಂಶವಾಗಿತ್ತು. ಆದರೆ ಸುಳ್ಳುದೂರು ನೀಡಿದ ಮಹಿಳೆಗೆ ಶಿಕ್ಷೆ ವಿಧಿಸಲು ಅವಕಾಶ ನೀಡಿದ್ದು ಮಾತ್ರ ಕೆಲವು ವಲಯಗಳಲ್ಲಿ ಚರ್ಚೆಗೆ ಕಾರಣವಾಗಿತ್ತು.

ಲೈಂಗಿಕ ಕಿರುಕುಳ ಹೆಚ್ಚಾಗಿ ನಡೆಯುವುದು ಪುರುಷರಿಂದ ಎಂಬುದು ನಿಜ. ಆದರೆ ಕೆಲವು ಮಹಿಳೆಯರು ತಮ್ಮ ಒನಪು, ವಯ್ಯಾರದಿಂದ ಕಚೇರಿಗಳಲ್ಲಿ ಆಯಕಟ್ಟಿನ ಸ್ಥಳ ಗಿಟ್ಟಿಸಿಕೊಳ್ಳುವ ಕುರಿತು ಪುರುಷ ಸಹೋದ್ಯೋಗಿಗಳಲ್ಲಿ ಮೇಲಧಿಕಾರಿಗಳ ಬಗ್ಗೆ ಅಸಹನೆ ಇರುವುದೂ ಸುಳ್ಳಲ್ಲ. ತಮ್ಮ ಅಸಾಮರ್ಥ್ಯವನ್ನು ಮುಚ್ಚಿಕೊಳ್ಳಲು ಕೆಲವು ಪುರುಷರು ಹೀಗೆ ವದಂತಿಗಳನ್ನು ಹಬ್ಬುತ್ತಾರೆ, ಮಹಿಳೆಯನ್ನು ಎರಡನೇ ದರ್ಜೆಯವಳಾಗಿ ಕಾಣುವ ಪುರುಷ ಅಹಂಕಾರವೇ ಇದಕ್ಕೆ ಕಾರಣ ಎಂಬುದೂ ನಿಜ.

ಬಹುತೇಕ ಉದ್ದಿಮೆಗಳಲ್ಲಿ ಇಂದು ರಾತ್ರಿ ಪಾಳಿ ಅನಿವಾರ್ಯ. ಪುರುಷನಿಗೆ ರಾತ್ರಿ ಪಾಳಿ ನಿಭಾಯಿಸಲು ಸಾಧ್ಯವಾಗುವುದಾದರೆ ಮಹಿಳೆಗೂ ಖಂಡಿತಾ ಸಾಧ್ಯ. ಆದರೆ ತಾನು ಮಹಿಳೆ ಎಂಬ ವಿಶೇಷ ಅವಕಾಶವನ್ನು ಬಳಸಿಕೊಂಡು ರಾತ್ರಿ ಪಾಳಿಯನ್ನು ನಿರಾಕರಿಸುವುದಾಗಲೀ ಅಥವಾ ಪುರುಷ ಮಾಡುವ ಕೆಲವು ಕೆಲಸಗಳು ತನ್ನ ಕೈಯಲ್ಲಿ ಆಗುವುದಿಲ್ಲ ಎಂದು ಹಿಂದೇಟು ಹಾಕುವುದಾಗಲೀ– ಮಹಿಳೆಯೇ ಮಹಿಳೆಗೆ ದಕ್ಕುವ ಅವಕಾಶಗಳನ್ನು ವಿರೋಧಿಸಿದಂತೆ ಆಗುತ್ತದೆ. ರಾತ್ರಿ ಪಾಳಿ ಅಥವಾ ಕ್ಲಿಷ್ಟಕರ ಕೆಲಸಗಳು ಮಹಿಳೆಯರಿಗೆ ಆಗುವುದಿಲ್ಲ ಎಂಬ ನೆಪ ನೀಡಿ ಕೆಲವು ಉದ್ದಿಮೆದಾರರು ಇತ್ತೀಚಿನ ವರ್ಷಗಳಲ್ಲಿ ಮಹಿಳೆಯರನ್ನು ನೇಮಿಸಿಕೊಳ್ಳುವುದನ್ನೇ ನಿಲ್ಲಿಸಿದ್ದಾರೆ! ಅಂದರೆ ಹಿನ್ನಡೆ ಶುರುವಾಗಿದೆ. ಈ ಹಿನ್ನಡೆಗೆ ಮಹಿಳೆಯೇ ಕಾರಣವಾಗಿದ್ದಾಳೆ ಎಂಬುದು ಒಂದು ವಿಪರ್ಯಾಸ. ಇಲ್ಲಿ ಯಾವುದೇ ರೀತಿಯ ಲೈಂಗಿಕ ಕಿರುಕುಳದ ಪ್ರಶ್ನೆ ಬರುವುದಿಲ್ಲ.

ಪುರುಷ ಮಾಡುವ ಎಲ್ಲ ಕೆಲಸಗಳನ್ನೂ ಮಹಿಳೆ ಒಪ್ಪಿಕೊಳ್ಳಲು ಸಾಧ್ಯವಾಗುವುದಾದರೆ, ಕಚೇರಿಗಳಲ್ಲಿ ಮಹಿಳೆಯರ ಸಂಖ್ಯೆ ಪುರುಷರಿಗೆ ಸರಿಸಾಟಿಯಾಗುತ್ತದೆ. ಆಗೇನೂ ನಡೆಯದು ಗಂಡಸಿನ ಆಟ ಎಂಬುದು ಅತಿಶಯೋಕ್ತಿ ಎನಿಸಿದರೂ, ಲಿಂಗ ಅಸಮಾನತೆ ವಿರುದ್ಧ ದಿಟ್ಟ ನಡೆಯಂತೂ ಆಗುತ್ತದೆ.

■ ಗುಡಿಹಳ್ಳಿ ನಾಗರಾಜ



ಈಶ್ವರ್